ಪ್ರತಿಕ್ರಿಯೆ ವ್ಯಕ್ತಪಡಿಸಿದಳು. 'ನೀವು ಫ್ರೀಯಾಗಿದ್ದರೆ ಒಂದು ನಾಲ್ಕು ದಿನ ಇಲ್ಲಿಗೆ ಬಂದು ಹೋಗಿ ಅಂತ ನಾನು ಬರೆದದ್ದು. ಅಲ್ಲದೆ ನಿಮಗೆ ಗೊತ್ತಲ್ಲ, ನನ್ನ ಮಗಳು ಆಯುಷಿ ಯಾರ ಮಾತನ್ನು ಕೇಳುವವಳೇ ಅಲ್ಲವೆಂದು! ಆದರೆ ನಿಮ್ಮ ಮಾತನ್ನು ಆಕೆ ಕೇಳಬಹುದೇನೋ ಎಂಬ ಆಸೆ ನನ್ನಲ್ಲಿ ಇದೆ. ಅದನ್ನೆಲ್ಲ ನಾನು ಪತ್ರದಲ್ಲಿ ನಿಮಗೆ ಬರೆದಿದ್ದೆ. ಈಗ ಮತ್ತೆ ಹೇಳುವಂತದ್ದು ಏನೂ ಇಲ್ಲ. ಈಗಿನ ನಿಮ್ಮ ಸಮಸ್ಯೆಗೆ ಒಂದು ಪರಿಹಾರ ಸಿಗುತ್ತದೆ ಎಂದು ನಿಮಗೆ ಅನಿಸಿದಾಗ ಜಸ್ಟ್ ಒಂದು 'ಕಾಲ್' ಕೊಟ್ಟು ಇಲ್ಲಿಗೆ ಹೊರಟುಬಿಡಿ. ನಾನು ಮಗಳನ್ನು ಗಂಡನ ಮನೆಯಿಂದ ನನ್ನ ಮನೆಗೆ ಕರೆಸುತ್ತೇನೆ' ಎಂದವಳೇ ರಾಯರು 'ಓ.ಕೆ ಓ.ಕೆ' ಎಂದದ್ದನ್ನು ಕೇಳಿಸಿಕೊಂಡು, 'ಹೇಗಿದ್ದಾರೆ ಸರೋಜಕ್ಕ? ಈಗ ಅವರ ಅಸ್ತಮಾ ಕಂಟ್ರೋಲಿಗೆ ಬಂತಾ ಹೇಗೆ?' ಎಂದು ಪ್ರಶ್ನಿಸಿದಳು..

ರಾಯರು 'ನೌ ಶಿ ಈಸ್ ಆಲ್‌ರೈಟ್. ಅದು ಕಾಯಿಲೆ ಅಲ್ಲ, ಮಾನಸಿಕ ಒತ್ತಡದಿಂದ ಕಾಣಿಸಿಕೊಂಡ ರೋಗಲಕ್ಷಣ ಎಂದು ಹಿಂದೆಯೇ ನಾನು ನಿನಗೆ ಹೇಳಿದ್ದೆ. ಈಗಲೂ ನಾನು ಹೇಳುವುದು ಅದನ್ನೇ. ಬಟ್ ಅದರ ಕುರಿತಾದ ವಿವರಣೆ ನಿನಗೆ ಯಾಕೆ ಹೇಳಬೇಕು ಎಂದು ಸುಮ್ಮನಿದ್ದೆ. ಈ ಸಲ ಬಂದಾಗ ನಿನಗೆ ಅದರಲ್ಲಿ ಆಸಕ್ತಿ ಇದ್ದರೆ ನಾನು ಹೇಳಬಹುದು' ಎಂದರು.

ಜಯಂತಿ 'ಕೇಳುವುದು ಬೇಡ ಅಂತ ಯಾವತ್ತೂ ಇಲ್ಲ ಸರ್. ಆದರೆ ಈಗ ನನ್ನ ಮುಂದಿರುವ ಸಮಸ್ಯೆ ಅದೇ ಆಯುಷಿಯದ್ದನ್ನು ಹೇಗೆ ಪರಿಹರಿಸುವುದು ಎನ್ನುವುದು ಬಿಟ್ಟರೆ ಬೇರೇನೂ ನನಗೆ ಹೊಳೆಯುತ್ತಿಲ್ಲ. ಕಾಲೇಜಿನಲ್ಲಿ ಕ್ಲಾಸುಗಳನ್ನು ತೆಗೆದುಕೊಳ್ಳಲೂ ಈಗ ನನಗೆ ಮನಸ್ಸಿಲ್ಲ. ಇದಕ್ಕೆಲ್ಲ ಪರಿಹಾರ ಅಂದರೆ ನಮ್ಮ ಸಮಸ್ಯೆಯನ್ನು ಕೇಳುವ, ಪರಿಹಾರ ಸೂಚಿಸಲು ಸಾಧ್ಯವಿಲ್ಲದಿದ್ದರೂ ಸಹಾನುಭೂತಿ ಸೂಚಿಸಬಲ್ಲ ಯಾರಾದರೊಬ್ಬರು ಹತ್ತಿರ ಇದ್ದರೆ ನಾನು ಖಂಡಿತ ಈಗಿನಷ್ಟು ಸಫರ್ ಆಗುತ್ತಿರಲಿಲ್ಲ ಎಂದು ಅನಿಸುತ್ತಿದೆ. ನನ್ನ ಗಂಡ ಆಕಸ್ಮಿಕವಾಗಿ ಆಘಾತದಲ್ಲಿ ನಿಧನರಾದಾಗ ನಾನು ಅನಾಥೆ ಅಂತ ಅನಿಸಿದರೂ ವಿಶೇಷವಾಗಿ ನೀವು ಕೊಟ್ಟ ಧೈರ್ಯ ಹಾಗೂ ಮಗಳು ಆಯುಷಿಗಾಗಿ ನಾನು ಬದುಕಬೇಕು ಎನ್ನುವ ಛಲ ನನ್ನಲ್ಲಿದ್ದದ್ದು ಎಷ್ಟು ಉಪಕಾರವಾಯಿತೋ ಅಷ್ಟೇ ನಮ್ಮ ಕಾಲೇಜು ಟ್ರಸ್ಟಿಗಳಿಂದ ಹಿಡಿದು ಪ್ರಾಧ್ಯಾಪಕರೆಲ್ಲ ನೀಡಿದ ಸಾಂತ್ವನ ನನ್ನನ್ನು ನಿಜವಾಗಿ ಬದುಕಿಸಿತ್ತು. ಆದರೆ ಈಗ ಹಾಗಿಲ್ಲ ಸರ್. ನೀವಂತೂ ಶಾಶ್ವತವಾಗಿ ನನ್ನಿಂದ ನೂರಾರು ಮೈಲು ದೂರ ಹೋಗಿ ನೆಲೆಸಿದ್ದೀರಿ. ಕಾಲೇಜಿನ ಎಲ್ಲಾ ಸಹೋದ್ಯೋಗಿಗಳು ನನ್ನ ಬಗ್ಗೆ ಈಗಲೂ ತುಂಬಾ ಚೆನ್ನಾಗಿಯೇ ಇದ್ದರೂ, ತೀರಾ ಪರ್ಸನಲ್ ಆದ ಸಮಸ್ಯೆಗಳನ್ನು ಹೇಳಿಕೊಳ್ಳಲು ಒಬ್ಬರಾದರೂ ಬೇಕೆಂದರೆ ನಿಮ್ಮ ಹಾಗಿರುವವರು ಇಲ್ಲಿ ಯಾರೂ ಇಲ್ಲ. ಇದು ರಾತ್ರೆ ಹಗಲು ನನ್ನನ್ನು ಕಾಡುವುದರಿಂದ ನೀವು ಬನ್ನಿ ಅಂತ ನಾನು ಬರೆದದ್ದು'.

ರಾಯರಿಗೆ ಜಯಂತಿ ತನ್ನ ಬಗ್ಗೆ ಇರಿಸಿದ ವಿಶ್ವಾಸದಿಂದ ಸಂತೋಷವಾಯಿತು. ಆದರೆ ಈ ಸರೋಜ ನಮ್ಮ ನಡುವಿನ ಈ ಸ್ನೇಹವನ್ನು ತಪ್ಪಾಗಿ ಅರ್ಥೈಸುತ್ತಿದ್ದಾಳಲ್ಲ ಎನ್ನುವುದು ಅವರ ಮುಂದೆ ಬಂತು. ಇದು ದಿನಾ ನಮ್ಮಿಬ್ಬರನ್ನೂ ಕಾಡುವುದಕ್ಕಿಂತ ನಾವಿಬ್ಬರೂ ಜಯಂತಿಯಿಂದ ದೂರ ಹೋದರೆ ಶಾಶ್ವತವಾಗಿ ಕಾಡದೇ ಇರಬಹುದಲ್ಲ ಎಂದು ತಾನೇ ನಾವು ದೂರ ಬಂದದ್ದು ಎಂದುಕೊಂಡ ರಾಯರು ಮತ್ತೆ ಜಯಂತಿ ಇದ್ದಲ್ಲಿಗೆ ನಾವು ಅನಿವಾರ್ಯವಾಗಿ ಹೋಗಬೇಕಾದರೆ ಈ ಸರೋಜ ಇನ್ನೇನು ತಪ್ಪು ತಿಳಿಯುತ್ತಾಳೋ ಎಂದುಕೊಂಡು, 'ನೋಡು ಜಯಂತಿ, ಬದುಕು ಅಂದಮೇಲೆ ಇದೆಲ್ಲ ಇದ್ದದ್ದೇ. ನಾನು ಬಂದಾಗ ಒಟ್ಟಿಗೆ ಕುಳಿತು ಚರ್ಚಿಸೋಣ' ಎನ್ನುತ್ತಾ ಫೋನು ಕಟ್ ಮಾಡಿದರು.

ರಾಯರ ಜೊತೆ ವಾಕಿಂಗ್‌ನಲ್ಲಿದ್ದ ಶೆಟ್ಟರು 'ಏನಂತೆ ಜಯಂತಿ ಮೇಡಂ ಅವರದ್ದು? ಪತ್ರದಲ್ಲಿ ಬರೆದದ್ದಕ್ಕಿಂತ ಮತ್ತೇನು ಹೊಸ ಬೆಳವಣಿಗೆ ಆಗಿಲ್ಲ ತಾನೇ?' ಎಂದರು.

ರಾಯರು 'ಹಾಗೇನೂ ಇದ್ದ ಹಾಗೆ ಇಲ್ಲ' ಎನ್ನುತ್ತಾ 'ಅಂದಹಾಗೆ ಶೆಟ್ಟರೇ, ನನ್ನ ತಲೆಯಲ್ಲೊಂದು ಪ್ಲಾನು ಹೊಳೆಯುತ್ತಿವೆ. ನಾನು ಜಯಂತಿಯ ಸಮಸ್ಯೆಯನ್ನು ಪರಿಹರಿಸುತ್ತೇನೋ ಇಲ್ಲವೋ ಬಟ್ ಅದು ಏನು ಎಂದು ಕೇಳಲಾದರೂ ನಾನು ಹೋಗಬೇಕಲ್ಲ ರಾಂಪುರಕ್ಕೆ?' ಎಂದು ಮಾತು ನಿಲ್ಲಿಸಿ, ಆಮೇಲೆ 'ಆದರೆ ಇದನ್ನು ಸರೋಜಳಿಗೆ ಹೇಳುವ ರೀತಿ ಬೇರೆಯದ್ದಾಗಿರಬೇಕು. ಅದು ಹೇಗಿರಬೇಕು ಅಂದರೆ 'ಆಕೆ ಈ ಊರು ಬಿಟ್ಟು ಹೋಗೋಣ ಎಂದು ಹೇಳಿದ್ದಕ್ಕೂ ಮತ್ತು ಈ ಹಳ್ಳಿಯ ರಾಜಕೀಯ ನನಗೆ ಬೇಡ ಅಂತ ಬಹಳ ದಿನಗಳಿಂದ ಆಕೆಗೆ ಅನಿಸಿದ್ದಕ್ಕೂ ಆಯ್ತು ಎಂಬಂತೆ ಅದು ಇರಬೇಕು. ಆಗ ಆಕೆ ಹೋಗುವುದಾದರೆ ಎಲ್ಲಿಗೆ? ಎಂದು ಕೇಳಿಯೇ ಕೇಳುತ್ತಾಳೆ. ಆಗ ನಾನು ರಾಂಪುರ ಬಿಟ್ಟು ಬೇರೆ ಯಾವ ಸ್ಥಳವೂ ನನಗೆ ಹೊಳೆಯುವುದಿಲ್ಲವಲ್ಲ? ಎಂದು ಅವಳನ್ನೇ ಪ್ರಶ್ನಿಸುತ್ತೇನೆ. ಜೊತೆಗೆ ರಾಂಪುರ ಯಾಕೆ ಅನ್ನುವುದಕ್ಕೆ ಸಮರ್ಥನೆಯಾಗಿ ಅಲ್ಲಿ 'ನಮ್ಮ ಹಳೆ ಸ್ನೇಹಿತರಿದ್ದಾರೆ, ಈಗಲೂ ಹನುಮಂತೇಶ್ವರ ಕಾಲೇಜಿಗೆ ಹೋದರೆ, ಪ್ರಾಂಶುಪಾಲಗಿರಿ ಅಲ್ಲದಿದ್ದರೂ ವಿಸಿಟಿಂಗ್ ಪ್ರೊಫೆಸರ್ ಆಗುವ ಅವಕಾಶ ಇದೆ ಎನ್ನುವ ಭರವಸೆ ಇದೆ ಎನ್ನುವುದನ್ನೆಲ್ಲ ಹೇಳಬೇಕು, ಆಮೇಲೆ ನನ್ನ ಯೋಚನೆ ಹೀಗೆ, ಇನ್ನು ನಿನ್ನಿಷ್ಟ ಎಂದು ಸರೋಜಳಿಗೆ ಹೇಳುವುದು. ಆಗ ಆಕೆಗೆ ರಾಂಪುರಕ್ಕೆ ಬೇಡ ಅನ್ನುವುದು ಕಷ್ಟವಾಗುತ್ತದೆ! ಅಷ್ಟೇ ಅಲ್ಲ, ನಾವು ಊರು ಬಿಟ್ಟು ಮರಳಿ ಹೋಗುವುದಾದರೂ ಬೇರೆ ಎಲ್ಲಿಗೆ ಎಂಬ ಭಾವ ಆಕೆಯಲ್ಲೂ ಬಂದು 'ಸರಿ ಹೋಗೋಣ!' ಎಂದು ಆಕೆ ಹೇಳಲೂಬಹುದು' ಎಂದು ರಾಯರು ಶೆಟ್ಟರಿಗೆ ಹೇಳುತ್ತಿದ್ದ ಹಾಗೆ, ಶೆಟ್ಟರು 'ಸರೋಜಕ್ಕ ಅಷ್ಟು ದಡ್ಡಿ ಅಲ್ಲ ರಾಯರೇ, ಈ ನಿಮ್ಮ ಮಾತನ್ನು ಕೇಳುವುದಕ್ಕೆ! ಆದರೂ ಕೇಳಬಹುದು' ಎಂದರು.

ತಕ್ಷಣ ರಾಯರು ಶೆಟ್ಟರು ಹೆಗಲ ಮೇಲೆ ಕೈಹಾಕುತ್ತಾ 'ನಾನು ಈಗ ಹೇಳಿದ ವಿಚಾರವನ್ನು ನೀವೇ ಸರೋಜಾಳಿಗೆ ಹೇಳಿದರೆ ಹೇಗೆ? ಅದು ಹೆಚ್ಚು ವಾಸ್ತವವಲ್ಲವೇ? ಎಂದರು.

ಇಬ್ಬರೂ ಹೀಗೆ ಮಾತನಾಡುತ್ತಾ ಮನೆಗೆ ಕಾಲಿಡುವಾಗ 'ಸರೋಜಾ ಫೋನಿನಲ್ಲಿ ಹೌದಾ? ಹೌದಾ? ಎಂದು ಹೇಳುತ್ತಾ 'ಆಯ್ತು ಅಣ್ಣ ಇವರು ವಾಕಿಂಗ್‌ನಿಂದ ಈಗ ಬರುತ್ತಿದ್ದಾರೆ ಅಂತ ಕಾಣುತ್ತದೆ. ನಾವು ಈ ದಿನ ಸಂಜೆ ಅಥವಾ ನಾಳೆ ಬೆಳಗ್ಗೆ ನಿಮ್ಮಲ್ಲಿಗೆ ಬರುತ್ತೇವೆ' ಎಂದು ಫೋನು ಕೆಳಗಿಟ್ಟರು.

ರಾಯರು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಾ 'ಎಲ್ಲಿಗೆ ನಾವು ಬರುತ್ತೇವೆ ಅಂದದ್ದು ನೀನು?' ಎಂದು ಸರೋಜಾಳನ್ನು ಪ್ರಶ್ನಿಸಿದರು.

ಸರೋಜಾ ಗಂಭೀರವಾಗಿ 'ನನ್ನ ಅಣ್ಣನಿದ್ದಲ್ಲಿಗೆ!' ಎನ್ನುತ್ತಲೇ 'ಇಂದಿನ ದಿನಪತ್ರಿಕೆಯಲ್ಲಿ ಮೊನ್ನೆ ನಮ್ಮ ಮನೆಗೆ ಪುಂಡರು ಬಂದು ಬೆದರಿಸಿದ ಸುದ್ದಿ ಬೋಕ್ಸ್ ಐಟಂನಲ್ಲಿ ಬಂದಿದೆ ಎಂದು ಅವನು ಹೇಳಿದ' ಎನ್ನುತ್ತಾ ನಿವೃತ್ತ ಪ್ರೊಫೆಸರ್ ಮತ್ತು ಹಿರಿಯ ಸಾಹಿತಿ ಕೆ. ಶ್ರೀನಿವಾಸರಾವ್ ಅವರ ಮನೆಗೆ ಮೂಲಭೂತವಾದಿಗಳ ದಾಳಿ ಎಂಬ ಶಿರೋನಾಮೆಯಲ್ಲಿ ದೊಡ್ಡದಾಗಿ ಅದು ಪ್ರಕಟವಾಗಿದೆಯಂತೆ ಎಂದೂ ಅಂದ' ಎಂದರು.

ರಾಯರು 'ಹೌದಾ? ಯಾರು ಕೊಟ್ಟಿರಬಹುದು ಈ ಸುದ್ದಿ?' ಎಂದು ಸದಾಶಿವ ಶೆಟ್ಟರ ಕಡೆಗೆ ಮುಖ ಮಾಡಿ ಪ್ರಶ್ನೆಯಂತೆ ನೋಡಿದಾಗ, 'ಬೇರೆ ಯಾರು ಕೊಡುತ್ತಾರೆ ರಾಯರೇ. ಕಾರ್ಕಳ ಪೋಲೀಸ್ ಸ್ಟೇಶನ್ನಿನಿಂದಲೇ ಅದು ಹೋಗಿರಬೇಕು. ಎಸ್.ಐ. ನಿಮ್ಮ ಶಿಷ್ಯರಲ್ಲವೇ?' ಎಂದು ಸಣ್ಣಗೆ ನಕ್ಕು – 'ಒಳ್ಳೆದಾಯಿತು ಬಿಡಿ. ನೀವು ಏನು ಎನ್ನುವುದು ಆ ಕಿಲಾಡಿಗಳಿಗೂ ಈಗ ತಿಳಿಯುತ್ತದೆ' ಎಂದರು ಗಂಭೀರವಾಗಿ.

'ನಮ್ಮ ಜಿಲ್ಲೆಯೊಳಗೆ ಮಾತ್ರ ಈ ಸುದ್ದಿ ಪ್ರಕಟವಾದರೆ ಚಿಂತಿಲ್ಲ ಶೆಟ್ಟರೇ. ಸ್ಟೇಟ್ ನ್ಯೂಸಾಗಿ ಬಂದಿದ್ದರೆ ಫೋನ್‌ಕಾಲ್ ಎಸ್.ಎಂ.ಎಸ್. ಎಲ್ಲಾ ಬರಲು ಪ್ರಾರಂಭವಾಗಿ ಎಲ್ಲರಿಗೂ ಹೇಳಿದ್ದನ್ನೇ ಹೇಳಿ ನನಗೆ ಸಾಕುಸಾಕಾಗಿ ಹೋಗಲಿಕ್ಕುಂಟು!' ಎಂದು ಆತಂಕ ವ್ಯಕ್ತಪಡಿಸಿದರು ರಾಯರು.

ಸರೋಜಮ್ಮನ ಮುಖದಲ್ಲಿ ನಗು ಬಂತು. 'ನಿಮಗೆ ಬೇರೆ ಏನು ಕೆಲಸ ಇದೆ ಈಗ? ಶುದ್ಧ ಸೋಮಾರಿಯಾಗಿದ್ದೀರಿ ಸೀತಾಪುರಕ್ಕೆ ಬಂದ ಮೇಲೆ! ರಾಂಪುರದಲ್ಲಿರುವಾಗ ನಿಮ್ಮ ಓದು ಏನು? ಬರವಣಿಗೆ ಏನು? ಭೇಟಿ ಮಾಡಲು ಬರುವವರು ಎಷ್ಟು? ನೀವು ಸದಾ ಬಿಜಿ ಇದ್ದಿರಿ. ಈಗ ಹಾಗಿಲ್ಲ ತಾನೆ? ಬರಲಿ ಫೋನ್‌ಕಾಲ್. ಒಬ್ಬೊಬ್ಬರ ಹತ್ತಿರ ಅರ್ಧರ್ಧ ಗಂಟೆ ಮಾತಾಡಿ' ಎಂದರು.

ರಾಯರು 'ಅದು ಹೌದು ಕಣೇ. ಅದಕ್ಕೇ ಇರಬಹುದೇನೋ. ನಾನು ಮತ್ತೆ ಬಿಜಿ ಆಗಿರಬೇಕು ಎಂದು ಈ ಕಿಲಾಡಿಗಳು ನನ್ನನ್ನು ಎಚ್ಚರಿಸಲು ಬಂದದ್ದು. ಆದರೆ ನೀನು ಹೇಳಿದ ಹಾಗೆ ನನಗೂ ಈಗ ಈ ಸೀತಾಪುರಕ್ಕೆ ವಿದಾಯ ಹೇಳೋಣ ಎಂದು ಅನಿಸತೊಡಗಿದೆ' ಎಂದರು. ಅವರು ಹಾಗೆ ಹೇಳುವಾಗ ಅವರಲ್ಲಿ ಸರೋಜಾ ಇದಕ್ಕೆ ಏನು ಪ್ರತಿಕ್ರಿಯೆ ಕೊಡಬಹುದು ಎಂಬ ಕುತೂಹಲವಿತ್ತು.

(ಸಶೇಷ)